# ಇಂದು ಮಕ್ಕಳ ದಿನಾಚರಣೆ, ಹಿರಿಯರು ಮಾಡಬೇಕಿದೆ ಚಿಂತನೆ

ಇಂದು ನಮ್ಮೆಲ್ಲ ಮಕ್ಕಳ ದಿನಾಚರಣೆ, ಅವರೆಲ್ಲಾ ಸಂತಸ ಸಡಗರದಿಂದ ಬೀಗಾಬೇಕಾದ ಹಾಗೂ ಇದು ನಮ್ಮದೇ ದಿನ ಎಂದು ಠೀವಿಯಿಂದ ಇರಬೇಕಾದ ದಿನ, ನನಗಿನ್ನು ಜ್ಞಾಪಕವಿದೆ ನಾನು ಏಳನೇ ತರಗತಿಯಲ್ಲಿದ್ದಾಗ ನಮ್ಮ ಶಾಲೆಯಲ್ಲಿ ಆಚರಿಸಿದ ಮಕ್ಕಳ ದಿನಾಚರಣಾ ದಿನದಂದು ನಡೆದ ಸಮಾರಂಭದ ಮುಖ್ಯ ಅತಿಥಿ ನಾನೇ ಆಗಿದ್ದೆ, ಅವತ್ತು ನನ್ನದೆ ಭಾಷಣ, ದಿನವೂ ನಮ್ಮ ಶಿಕ್ಷಕರು ಮಾತನ್ನಷ್ಟೆ ಕೇಳುತ್ತಿದ್ದ ನನ್ನ ಸಹಪಾಠಿಗಳೆಲ್ಲರಿಗೂ ಅದೊಂದು ಕೌತುಕ ಅಂದು ಶಿಕ್ಷಕರು ಮಕ್ಕಳನ್ನು ಹೊಡೆಯುವಂತಿಲ್ಲ ಅದರ ಲಾಭವನ್ನು ಪಡೆಯದೆ ಖಂಡಿತ ನಾವು ಬಿಡುತ್ತಿರಲಿಲ್ಲ

ಇಂದು ಮತ್ತೊಂದು ಮಕ್ಕಳ ದಿನಾಚರಣೆ ಆದರೆ ರಾಜ್ಯದಲ್ಲಿ ಸಡಗಡಪಡುವಂತ ವಾತವರಣ ಮುಸುಕಾಗಿದೆ, ಅವರ ಸಾಂವಿಧಾನಿಕ ಹಕ್ಕು ಒತ್ತೊಟ್ಟಿಗಿರಲಿ ಮೂಲ ಸಂರಕ್ಷಣೆಯೇ ದೊಡ್ಡ ಪ್ರಶ್ನೆಯಾಗಿದೆ, ಈ ವರ್ಷ ನಮಗೆ ಇನ್ನೊಂದು ಕಾರಣಕ್ಕೂ ಈ ದಿನ ಮಹತ್ವವಾಗಬೇಕಿತ್ತು ನಮ್ಮ ದೇಶದ ಶ್ರೀಕೈಲಾಶ್ ಸತ್ಯಾರ್ಥಿಯವರಿಗೆ ಮಕ್ಕಳ ಹಕ್ಕುಗಳ ದುಡಿಮೆಗಾಗಿಯೇ ನೋಬಲ್ ಶಾಂತಿ ಪುರಸ್ಕಾರ ಸಂದಾಯವಾಗಿದೆ ಆದರೆ ಹೆಮ್ಮೆಯ ವಿಷಯವೋ ? ಚಿಂತಿಸಬೇಕಾದ ಸಂಗತಿಯೋ? ಸತ್ಯಾರ್ಥಿಯವರ ದುಡಿಮೆ ಶ್ಲಾಘನಾರ್ಹ, ಆದರೆ ನಮ್ಮ ದೇಶದಲ್ಲಿನ ಮಕ್ಕಳ ಹಕ್ಕುಗಳ ವಂಚನೆ ನಾಚಿಕೆಗೇಡಿನ ಸಂಗತಿಯಲ್ಲದೇ ಮತ್ತೇನು ಅಲ್ಲ.

ಭಾರತ ಆತಿ ಹೆಚ್ಚು ಮಕ್ಕಳನ್ನು ಹೊಂದಿದ ದೇಶವಾಗಿದೆ. ಪ್ರಪಂಚದ ಸುಮಾರು 17%ನಷ್ಟು ಮಕ್ಕಳು ಭಾರತದಲ್ಲಿದ್ದಾರೆ. ಅಂದರೆ ಪ್ರಪಂಚದ ಪ್ರತಿ ಆರನೆಯ ಮಗು ಭಾರತದ್ದಾಗಿದೆ. ಸುಮಾರು 430 ಮಿಲಿಯನ್ 0-18 ವರ್ಷದೊಳಗಿನ ಮಕ್ಕಳಲ್ಲಿ, 160 ಮಿಲಿಯನ್ ನಷ್ಟು ಮಕ್ಕಳು ಆರುವರ್ಷದ ಒಳಗೆ ಹಾಗೂ 270 ಮಿಲಿಯನ್ ನಷ್ಟು ಮಕ್ಕಳು 6-18 ವರ್ಷದವರಾಗಿದ್ದಾರೆ. ಈ ದೇಶದ ಮೂರನೆ ಒಂದರಷ್ಟು ಜನಸಂಖ್ಯೆ ಮಕ್ಕಳದ್ದಾಗಿದ್ದಾರೂ, ಅದೇಕೋ ಅವರು ಅತ್ಯಂತ ನಿರ್ಲಕ್ಷಿತ ವರ್ಗಕ್ಕೆ ಸೇರಿಬಿಟ್ಟಿರುವಂತನಿಸುತ್ತದೆ. ಅವರ ಹಕ್ಕುಗಳಂತು ಅವರದಲ್ಲವೆನೋ ಅನ್ನುವಷ್ಟರಮಟ್ಟಿಗಿನ ವಾತಾವರಣ ನಮ್ಮದಾಗಿದೆ.

ಇದು ನಿಜಕ್ಕೂ ವಿಪರ್ಯಾಸ. ಮಕ್ಕಳ ವಿಚಾರದಲ್ಲಿ ಸಂವೇದನಾ ರಹಿತ ಸಮುದಾಯದ ಚರಿತ್ರೆ ನಮ್ಮದಲ್ಲ, ಮಕ್ಕಳನ್ನು ದೇವರ ಸಮಾನ ಎನ್ನುವ ಸಂಸ್ಕೃತಿ ಈ ದೇಶದ್ದು, ಆದರೆ ನಮ್ಮ ಘನ ಸಂವಿಧಾನ ಕೊಡ ಮಕ್ಕಳ ಕುರಿತು ಅತ್ಯಂತ ಸಂವೇದನಾ ಶೀಲವಾಗಿದೆ. ಮಕ್ಕಳಿಗೆ ವಿಶೇಷ ಸ್ಥಾನ ನೀಡಿ, "ರಾಜ್ಯವು ಮಕ್ಕಳ ಸ್ವಾತಂತ್ರ್ಯ ಮತ್ತು ಅಭಿಮಾನಕ್ಕೆ ಪೂರಕವಾಗಿ,ಅವರ ಆರೋಗ್ಯ ಪೂರ್ವ ವಿಕಾಸಕ್ಕೆ ಅನುವಾಗುವಂತ ಅವಕಾಶ ಮತ್ತು ಸೌಲಭ್ಯಗಳನ್ನು ಒದಗಿಸಿ ಅವರು ದೌರ್ಜನ್ಯಕ್ಕೆ ತುತ್ತಾಗದಂತೆ ಸಂರಕ್ಷಿತ ವಾತಾವರಣ ನೀಡುವ ಜವಾಬ್ದಾರಿಯನ್ನು ಹೊಂದಿದೆ" ಎಂದು ನಿರ್ದೇಶನ ಪೂರ್ವಕವಾಗಿ ತಿಳಿಸಿದೆ. ಆದರೆ ಇಂದಿಗೂ ಸಹ ಮಕ್ಕಳ ಸಂರಕ್ಷಣೆ ಮತ್ತು ಅವರಿಗೆ ಪೂರಕವಾದ ವಾತಾವರಣವನ್ನು ಒದಗಿಸಿಕೊಡುವಲ್ಲಿ ನಾವು ಗಣನೀಯವಾಗಿ ಸೋತಿದ್ದೇವೆ ಎಂದರೆ ಉತ್ಪ್ರೇಕ್ಷೆ ಆಗಲಾರದು. ಅನೇಕ ಕಾಯ್ದೆಗಳು,ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದರು, ಮಕ್ಕಳ ಸ್ಥಿತಿ ಶೋಚನೀಯ ಸ್ಥಿತಿಯಲ್ಲಿಯೇ ಮುಂದುವರೆಯುತ್ತಿದೆ. ಸಂಯುಕ್ತ ರಾಷ್ಟ್ರಗಳ ಮಕ್ಕಳ ಹಕ್ಕುಗಳ ಸಮಾವೇಶದ ನಿರ್ಣಯಗಳನ್ನು ಒಪ್ಪಿಕೊಂಡು ಎರಡು ದಶಕಗಳು ಕಳೆದಿದೆ. ಒಂಭತ್ತನೇ ಪಂಚವಾರ್ಷಿಕ ಯೋಜನೆಯಿಂದಲೇ ಕಲ್ಯಾಣ ಆಧಾರಿತ ಮಾರ್ಗದಿಂದ ಹಕ್ಕು ಆಧಾರಿತ ಮಾರ್ಗಕ್ಕೆ ಸರ್ಕಾರ ತನ್ನ ಕಾರ್ಯಕ್ರಮಗಳ ನೀತಿ ನಿರೂಪಣೆ ವಿನ್ಯಾಸದಲ್ಲಿ ದಿಶೆಯನ್ನು ಬದಲಾಯಿಸಿಕೊಂಡಿರುವುದಾಗಿ

ಹೇಳುತ್ತಿದೆ. ಆದರೆ ಈ ದೇಶ ಸ್ವಾತಂತ್ರ್ಯ ಹೊಂದಿ 6 ದಶಕ ಕಳೆದರೂ ಮಕ್ಕಳು ಮಾತ್ರ ತಮಗೆ ನ್ಯಾಯವಾಗಿ ದೊರೆಯಬೇಕಾದ ಹಕ್ಕುಗಳಿಂದ ಪೂರ್ಣವಾಗಿ ವಂಚಿತರಾಗುತ್ತಲೇ ಇದ್ದಾರೆ. ನಮ್ಮ ಸರ್ಕಾರ ಆಧಿಕಾರಶಾಹಿ ಮಕ್ಕಳನ್ನು "ಭವಿಷ್ಯದ ಪ್ರಜೆ"ಗಳಾಗೇ ನೋಡುತ್ತಿದೆ ಅದಕ್ಕೆ ಏನೋ,ಅವರ ಹಕ್ಕುಗಳನ್ನು ಕೊಡ "ನಾಳೆಗೆ ಕೊಟ್ಟರಾಯಿತು" ಎಂದು ಭಾವಿಸಿರಬೇಕು. ಸಂಖ್ಯೆಯಲ್ಲಿ ಭಲಾಢ್ಯರಾದರೂ,ಮಕ್ಕಳು ರಾಜಕೀಯವಾಗಿ ಅಶಕ್ತರೇ. ಮತದಾನ ಮಾಡಲು ಹದಿನೆಂಟು ತುಂಬ ಬೇಕಾಗಿರುವುದರಿಂದ ಅವರ ಕೂಗು ಸಂಸತ್ತಿಗೆ ಮುಟ್ಟುವುದೇ ಇಲ್ಲ.

**ಮಗು-ಮಕ್ಕಳ ವ್ಯಾಖ್ಯಾನ :-**

ನಮ್ಮ ಮುಂದಿರುವ ಅತ್ಯಂತ ಗೊಂದಲಮಯ ಹಾಗೂ ಸವಾಲಿನ ವಿಷಯವೆಂದರೆ 'ಮಗು-ಮಕ್ಕಳು' ಎಂಬುದರ ವ್ಯಾಖ್ಯಾನ. ವಿವಿಧ ಕಾಯ್ದೆಗಳು ವಿವಿಧ ರೀತಿಯಲ್ಲಿ ಮಕ್ಕಳನ್ನು ವ್ಯಖ್ಯಾನಿಸುತ್ತದೆ. ಬಾಲ ಕಾರ್ಮಿಕ(ನಿಯಂತ್ರಣ ಮತ್ತು ನಿರ್ಮೂಲನ) ಕಾಯ್ದೆ-1986,14 ವರ್ಷದೊಳಗಿನ ಪ್ರಾಯದ ವ್ಯಕ್ತಿಯನ್ನು 'ಮಗು' ಎಂದು ಪರಿಗಣಿಸಿದರೆ, ಮಕ್ಕಳ(ಕೆಲಸಕ್ಕಾಗಿ ಒತ್ತೆಯಿಡುವುದು)ಕಾಯ್ದೆ 1933, 15ವರ್ಷದ ಒಳಗಿರುವವರನ್ನು ಕನಿಷ್ಠ ವೇತನ ಕಾಯ್ದೆ 1948 14ವರ್ಷದ ಒಳಗಿರುವವರನ್ನು ಮಕ್ಕಳು ಎಂದು ವರ್ಗಿಕರಿಸುತ್ತವೆ, ಇತ್ತಿಚೆಗೆ ನಾವೆಲ್ಲರೂ ದೊಡ್ಡಮಟ್ಟದಲ್ಲಿ ಚರ್ಚಿಸುತ್ತಿರುವ ಶಿಕ್ಷಣ ಹಕ್ಕು ಕಾಯ್ದೆ 2009 ಸಹ ಕೇವಲ 14 ವರ್ಷ ಪ್ರಾಯದ ಒಳಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣದ ಹಕ್ಕನ್ನು ನೀಡಿದೆ.

ನಾವು ವಿಶ್ವ ಸಮುದಾಯದ ಮುಂದೆ ಒಪ್ಪಿರುವ ಸಂಯುಕ್ತ ರಾಷ್ಟ್ರಗಳ ಮಕ್ಕಳ ಹಕ್ಕುಗಳ ಸಮಾವೇಶದ ಪರಿಚ್ಛೇದ 01 ರ ಅನ್ವಯ 18 ವರ್ಷದೊಳಗಿನವರು ಮಕ್ಕಳು. ರಾಷ್ಟ್ರ ಕ್ರಿಯಾ ಯೋಜನೆ 2009 ಮಾತ್ರ 18ವರ್ಷದೊಳಗಿನವರನ್ನು ಮಕ್ಕಳು ಎಂದು ಪರಿಗಣಿಸುವ ಏಕೈಕ ಕ್ರಿಯಾ ನೀತಿಯಾಗಿದೆ. ಬಾಲನ್ಯಾಯ ಕಾಯ್ದೆ ಮತ್ತು ಲೈಂಗಿಕ ಅಪರಾಧಗಳ ವಿರುದ್ಧ ಮಕ್ಕಳ ರಕ್ಷಣಾ ಕಾಯ್ದೆ 2012 ಮಾತ್ರ ಸಂಯುಕ್ತ ರಾಷ್ಟ್ರದ ಸಮಾವೇಶದ ವ್ಯಾಖ್ಯಾನುಸಾರ ಮಕ್ಕಳನ್ನು ಗುರುತಿಸುವ ಕಾಯ್ದೆಗಳಾಗಿದೆ.

ಕಾಯ್ದೆ-ಕಾರ್ಯ ನೀತಿಗಳಲ್ಲಿನ ಇಂತಹ ವ್ಯತ್ಯಾಸಗಳು ಶೋಷಿತ ಮಗುವಿನ ಕಲ್ಯಾಣದ ಕಾರ್ಯಕ್ರಮಗಳಲ್ಲಿ ವ್ಯತಿರಿಕ್ತ ಪರಿಣಾಮ ಬೀರುತ್ತದೆ.ಅನುಷ್ಠಾನಗೊಳಿಸಬೇಕಾದ ಅಧಿಕಾರಿಗಳು ತಮ್ಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಎಡೆಮಾಡಿ ಕೊಡುತ್ತದೆ.

## ಮಕ್ಕಳ ಹಕ್ಕುಗಳು :-

1989ರಲ್ಲಿ ವಿಶ್ವ ಸಂಸ್ಥೆಯು ಮಕ್ಕಳ ಹಿತಾಸಕ್ತಿ ರಕ್ಷಣೆಗೆ ಮೈಲಿಗಲ್ಲಾದ **ಮಕ್ಕಳ ಹಕ್ಕುಗಳ ಬಗ್ಗೆ ಸಂಯುಕ್ತ ರಾಷ್ಟ್ರಗಳ ಸಮಾವೇಶ**ವನ್ನು ಆಯೋಜಿಸಿತ್ತು. ನಮ್ಮ ಭಾರತ ದೇಶವು ಸಹ ಸಮಾವೇಶದ ನಡವಳಿಕೆಗೆ ಸಹಿ ಮಾಡಿದೆ.ವಿಶ್ವದಾದ್ಯಂತ ಅನೇಕ ದೇಶಗಳಲ್ಲಿ ಮಕ್ಕಳು ಅತ್ಯಂತ ಹೀನಾಯ ಮತ್ತು ಕಳವಳಕಾರಿ ಸ್ಥಿತಿಯಲ್ಲಿ ಜೀವಿಸುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿದ ಸಮಾವೇಶವು ಎಲ್ಲಾ ಮಕ್ಕಳು ಸುರಕ್ಷಿತ ವಾತಾವರಣದಲ್ಲಿ ಜೀವಿಸುವುದು ಮತ್ತು ಅದಕ್ಕೆ ಪೂರಕವಾದ ವ್ಯವಸ್ಥೆಯನ್ನು ಕಲ್ಪಿಸುವುದು ಸದಸ್ಯ ರಾಷ್ಟ್ರಗಳ ಕರ್ತವ್ಯವೆಂದು ಪ್ರತಿಪಾದಿಸಿದೆ.

ಸದರೀ ಸಮಾವೇಶದಲ್ಲಿ ಮಕ್ಕಳಿಗೆ ನಾಗರೀಕ ಸಾಮಾಜಿಕ ಹಾಗೂ ಆರ್ಥಿಕ ಹಕ್ಕುಗಳನ್ನು ಒದಗಿಸಲಾಗಿದೆ **ಬದುಕುವ ಹಕ್ಕು, ರಕ್ಷಣೆಯ ಹಕ್ಕು, ಅಭಿವೃದ್ಧಿಯ ಹಕ್ಕು ಹಾಗು ಭಾಗವಹಿಸುವ ಹಕ್ಕು**. ಆದರೆ ಅದರ ನಿಜವಾದ ನೀಡುವಿಕೆಯ ಬಗ್ಗೆ ವಿಷೇಶವಾಗಿ ಹೇಳ ಬೇಕಿಲ್ಲ.

**ನಾವು ಏಕೆ ಮಕ್ಕಳ ಹಕ್ಕುಗಳ ಪ್ರತಿಪಾದನೆ ಮಾಡಬೇಕು?**

ಮೇಲ್ನೋಟಕ್ಕೆ ಗಮನಿಸಿದಾಗ ಅಭಿವೃದ್ಧಿ ಶೀಲ ರಾಷ್ಟ್ರವಾದ ಭಾರತದಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಪ್ರತಿಪಾದಿಸುವುದು ತೀರ ಅನಿವಾರ್ಯವೇ? ಈ ವಿಚಾರದಲ್ಲಿ ಸಾಕಷ್ಟು ಕಾಯ್ದೆ-ಕಾನೂನುಗಳು, ಮೊದಲನೇ ಪಂಚವಾರ್ಷಿಕ ಯೊಜನೆಯಿಂದ ಇಡಿದು 12ನೇ ಪಂಚವಾರ್ಷಿಕ ಯೊಜನೆಯವರಗೆ ಅನೇಕಾನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿರುವ ಈ ರಾಷ್ಟ್ರದಲ್ಲಿ, ಇದರ ಬಗ್ಗೆ ಚರ್ಚೆ ಅಷ್ಟು ಅಗತ್ಯವೇ? ವಿಶ್ವದ ಆರ್ಥಿಕ ಶಕ್ತಿಗಳಲ್ಲಿ ಒಂದಾದ, ವೈಜ್ಞಾನಿಕ ತಂತ್ರಜ್ಞಾನ ಮಹಾಶಕ್ತಿ ಹೊಂದಿರುವ ದೇಶಗಳ ಸಾಲಿನಲ್ಲಿ ಸಶಕ್ತವಾಗಿ ಬೀಗುತ್ತಿರುವ, ಇತ್ತಿಚೆಗೆ  ತಾನೇ ಮಂಗಳನಿಗೂ ಒಂದು ನೌಕೆ ಕಳುಹಿಸಿರುವ ಈ ದೇಶದಲ್ಲಿ ಮಕ್ಕಳ ಹಕ್ಕುಗಳ ಪ್ರತಿಪಾದನೆ ತೀರಾ ಅವಶ್ಯಕವಿಲ್ಲ, ನಾವು ಅಷ್ಟು ಕಾಳಜಿ ಇಲ್ಲದವರೇ? ಎಂದೆನಿಸಬಹುದು. ಇಲ್ಲಿ ನಮ್ಮ ಆರ್ಥಿಕ, ವೈಜ್ಞಾನಿಕ ತಂತ್ರಜ್ಞಾನದ ಸಾಧನೆಯನ್ನು ಅಲ್ಲಗೆಳೆಯುವ ಉದ್ದೇಶವಿಲ್ಲ.ಆದರೆ ನಾವೆಲ್ಲಾ ಪ್ರೀತಿಸಿ ಆರೈಕೆ ಮಾಡುವ, ನಮ್ಮ ಭವಿಷ್ಯದ ಕನಸಿನ ಹಕ್ಕಿಗೆ ರೆಕ್ಕೆಕಟ್ಟುವ ಮಕ್ಕಳು ಎಷ್ಟು ಅಸುರಕ್ಷಿತ, ನಿರ್ಲಕ್ಷಿತ ವಾತಾವರಣದಲ್ಲಿದ್ದಾರೆ ಎಂಬುದು ನಿಜಕ್ಕೂ ಚಿಂತನೆಗೀಡುಮಾಡುವ ಸಂಗತಿ.

- ☹ ನಮ್ಮ ದೇಶದಲ್ಲಿರುವ ಪ್ರತಿ ಎರಡನೇ ಮಗು, ಅಂದರೆ ಅರ್ಧಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಬಳುತ್ತಿದ್ದಾರೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-3 ರ ಪ್ರಕಾರ ಐದು ವರ್ಷದೊಳಗಿನ ಶೇ.50 ರಷ್ಟು ಮಕ್ಕಳು ಅಪೌಷ್ಠಿಕತೆ ಯಿಂದ ಬಳಳುತ್ತಿದ್ದಾರೆ,ಸಬ್ ಸಹಾರನ್ ಆಫ್ರಿಕಾಕ್ಕಿಂತ ನಮ್ಮ ದೇಶದಲ್ಲಿನ ಮಕ್ಕಳ ಆರೋಗ್ಯದ ಪರಿಸ್ಥಿತಿ ಹೀನಾಯವಾಗಿದೆ ಎನ್ನಬಹುದು.
- ☹ ಮಕ್ಕಳ ಲಿಂಗಾನುಪಾತ ಈ ತನಕ ಕಂಡರಿಯದ ಕಡಿಮೆ ಸಂಖ್ಯೆ ತಲುಪಿದೆ ಅಂದರೆ ಸಾವಿರ ಗಂಡುಮಕ್ಕಳಿಗೆ 914 ಹೆಣ್ಣು ಮಕ್ಕಳು ಇದ್ದಾರೆ.
- ☹ ಶೇ.22 ರಷ್ಟು ಮಕ್ಕಳು ಹುಟ್ಟಿನಲ್ಲೇ ಕಡಿಮೆ ತೂಕ ಹೊಂದಿದವರಾಗಿದ್ದಾರೆ.
- ☹ ಹುಟ್ಟಿದ 1000 ಮಕ್ಕಳಲ್ಲಿ 47 ಮಕ್ಕಳು ತಮ್ಮ ಮೊದಲನೇ ಹುಟ್ಟುಹಬ್ಬವನ್ನೇ ನೋಡುವುದಿಲ್ಲ.
- ☹ ಶೇ.79 ರಷ್ಟು ಮಕ್ಕಳು (6 ರಿಂದ 35 ತಿಂಗಳು) ಅನಿಮಿಕ್ ಆಗಿರುತ್ತಾರೆ.
- ☹ ಶೇ.54 ರಷ್ಟು ಮಕ್ಕಳು ಮಾತ್ರ ಸಂಪೂರ್ಣ ಲಸಿಕೆ ಪಡೆಯುತ್ತಾರೆ.
- ☹ 2000 ನೇ ಇಸವಿಗೆ ಹೋಲಿಸಿದರೆ ಮಕ್ಕಳ ಹತ್ಯೆ ಪ್ರಕರಣಗಳು ಶೇ.25 ರಷ್ಟು ಹೆಚ್ಚಾಗಿದೆ.
- ☹ ಶಾಲೆಯಿಂದ ಹೊರ ಬೀಳುವ ಪ್ರಾಥಮಿಕ ಹಂತದ ಮಕ್ಕಳ ಸಂಖ್ಯೆ ಶೇ.40.
- ☹ ಶೇ.35 ರಷ್ಟು ಅಂಗ ವೈಕಲ್ಯ ಹೊಂದಿದ ಮಕ್ಕಳು ಪ್ರಾಥಮಿಕ ಶಿಕ್ಷಣದಿಂದಲೇ ಹೊರಗುಳಿಯುತ್ತಿದ್ದಾರೆ
- ☹ ಹದಿಹರೆಯದ ಹೆಣ್ಣು ಮಕ್ಕಳಲ್ಲಿ ಶಾಲೆಯಿಂದ ಹೊರ ಬೀಳುವ ಪ್ರಮಾಣ ಶೇ.63.5 ರಷ್ಟು
- ☹ ಶೇ.45 ರಷ್ಟು ಹೆಣ್ಣು ಮಕ್ಕಳು 18 ವರ್ಷಕ್ಕೆ ಮುಂಚೆ ಮದುವೆಯಾಗುತ್ತಿದ್ದಾರೆ.
- ☹ ಶೇ.11.8 ರಷ್ಟು ಮಕ್ಕಳು ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

ಇವೆಲ್ಲವನ್ನೂ ಗಮನಿಸಿದಾಗ ಮಕ್ಕಳ ಹಕ್ಕುಗಳ ಮತ್ತು ಅದರ ಸಂರಕ್ಷಣೆಯ ವಿಚಾರದಲ್ಲಿ ನಾವು ತೀರಾ ನಿರ್ಲಕ್ಷ್ಯವಹಿಸಿದೆವು ಎಂದೆನಿಸದೆ ಇರಲಾರದು, ಬಹುಷಃ ಸಮಗ್ರ ಅಭಿವೃದ್ಧಿಯನ್ನು ಸಾಧಿಸಲು ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು ಮಕ್ಕಳ ಕಲ್ಯಾಣವನ್ನು ಮಾಡಿಬಿಡಬಹುದು ಎಂದು ಭಾವಿಸಿದ್ದೆವೂ? ಮಕ್ಕಳ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ವಿಶೇಷ ಆಸ್ಥೆ ಕೊಡುವ ಅವಶ್ಯಕತೆ ಇಲ್ಲ ಎಂಬುದು ನೀತಿ ನಿರೂಪಕರ ಅನಿಸಿಕೆಯೋ? ಈ ದೇಶದ ವ್ಯವಸ್ಥೆಯಲ್ಲಿ ಅಂಕೆಗೂ ಸಿಗದೇ ಕತ್ತಲಲ್ಲಿ ಕಳೆದು ಹೋಗುವ ಮಕ್ಕಳಷ್ಟೇ ಅಸ್ಪಷ್ಟ.

ಮಕ್ಕಳ ಸಂಖ್ಯೆಗನುಗುಣವಾಗಿ ಅಲ್ಲದಿದ್ದರೂ,ಸಮರ್ಪಕವಾಗಿ ಅಯವ್ಯದಲ್ಲಿ ಅವರ ಪಾಲನ್ನು ನೀಡುವುದು ನ್ಯಾಯಸಮ್ಮತ. ನಮ್ಮ ದೇಶ ಬಡತನ ಪೀಡಿತ, ಕಡಿಮೆ ಆದಾಯ ಹೊಂದಿದ ದೇಶಗಳ ಸಾಲಿನಿಂದ ಹೊರ ಬಂದು ಪ್ರಪಂಚದಲ್ಲಿ ಪ್ರಚಂಡವಾಗಿ ಹೊರಹೊಮ್ಮುತ್ತಿರುವ ಆರು ಆರ್ಥಿಕ ಶಕ್ತಿಗಳಲ್ಲಿ ಒಂದಾಗಿದೆ. ನಮ್ಮ ಸಂವಿಧಾನದಲ್ಲಿ ಖಾತ್ರಿ ಪಡಿಸಲಾದ ಹಕ್ಕುಗಳನ್ನು ಸುಮಾರು 46 ವಿಶೇಷ ಹಾಗೂ ಸ್ಥಳೀಯ ಕಾನೂನುಗಳು,ಸುಮಾರು 8 ಕಾರ್ಯ ನೀತಿಗಳು ಮತ್ತು ಕಾರ್ಯ ಯೋಜನೆಗಳು ಹಾಗೂ ಸುಮಾರು 80 ಕಾರ್ಯಕ್ರಮಗಳು / ಯೊಜನೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಸುಮಾರು 9 ಸಚಿವಾಲಯಗಳು ಈ 80 ಕ್ಕೂ ಹೆಚ್ಚು ನೇರ ಹಾಗೂ ಪರೋಕ್ಷ ಯೋಜನೆಗಳನ್ನು ಅನುಷ್ಠಾನಗೊಳಿಸುವ ಹೊಣೆ ಹೊತ್ತಿದೆ. ಆಯವ್ಯಯ ಈ ನಿಟ್ಟಿನಲ್ಲಿ ಬಹಳ ಪ್ರಮುಖವಾಗಿರುತ್ತದೆ. ಆದರೆ ಮಕ್ಕಳ ಕಲ್ಯಾಣ ಹಾಗು ಸಂರಕ್ಷಣೆಗಾಗಿ ಕೊಡಮಾಡಲಾಗುತ್ತಿರುವ ಹಣದ ಪ್ರಮಾಣ ತೀರ ನಗಣ್ಯ. ಒಂದು ಕಡೆ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ ನಾವು ಹೂಡುತ್ತಿರುವ ಹಣ ಅತಿ ಕಡಿಮೆ ಎಂದು ಚಿಂತಿಸುತ್ತಿದ್ದರೆ,ಅದಕ್ಕೂ ಮೀರಿದ ಆಘಾತಕಾರಿ ವಿಷಯ 'ನೀಡಿದ ಅನುದಾನದಲ್ಲೂ ಕಾಣುವ ಕೊರತೆ ವೆಚ್ಚದ ಅಂಕಿಸಂಖೆಗಳು. ನಮಗೆ ಎರಡು ವಿಚಾರ ತಿಳಿಸಬಹುದು ಒಂದು ಮಕ್ಕಳ ಅಭಿವೃದ್ಧಿಗಾಗಿ ನಾವು ಮಿಸಲಿಟ್ಟಿರುವ ಅನುದಾನ ಹೆಚ್ಚಿರಬಹುದು,ಅಗತ್ಯತೆಗಳನ್ನು ಅಂದಾಜು ಮಾಡುವ ನಮ್ಮ ಕ್ರಮ ಅವೈಜ್ಞಾನಿಕವಾಗಿರಬಹುದು ಅಥವಾ ಅವರ ಕಲ್ಯಾಣಕ್ಕಾಗಿ ದುಡಿಯಬೇಕಾದ ಇಲಾಖೆಗಳಲ್ಲಿ ಅಸಮರ್ಥತೆ ಇರಬೇಕು ಎರಡರಲ್ಲಿ ಒಂದಂತೂ ಸತ್ಯ ಅದು ಮಕ್ಕಳ ಅಭಿವೃದ್ಧಿ ಮತ್ತು ರಕ್ಷಣೆ ಕುರಿತು ನಮ್ಮ ದಿವ್ಯ ನಿರ್ಲಕ್ಷ್ಯ.

ಚಂದ್ರನಿಗೆ ಮಾನವರಹಿತ ಅಂತರಿಕ್ಷ ನೌಕೆ ಕಳುಹಿಸಲು ಸಂಪನ್ಮೂಲವಿರುವ ನಾವು,ಕಾಮನ್ವೆಲ್ತ್ ಕ್ರಿಡಾಕೂಟಕ್ಕಾಗಿ ಸುಮಾರು ಎಪ್ಪತ್ತು ಸಾವಿರ ಕೋಟಿ ವ್ಯಯಿಸುವ ಸಾಮರ್ಥ್ಯವಿರುವ ನಮ್ಮ ದೇಶದಲ್ಲಿ ಮಕ್ಕಳ ಕಲ್ಯಾಣಕ್ಕಾಗಿ ಆಯವ್ಯಯದ ಕೊರತೆ ನೀಡುವ ಅಲ್ಪಕಾಸಿನಲ್ಲೂ ಉಳಿಕೆ ಮಾಡುವ ಅಸಮರ್ಥ ವ್ಯವಸ್ಥೆ. ಮಕ್ಕಳ ಹಕ್ಕುಗಳ ಸಮರ್ಪಕ ಅನುಷ್ಠಾನಕ್ಕಾಗಿ ಪ್ರತಿ ಪಾದಿಸುವುದು ಅಗತ್ಯವಲ್ಲವೇ?.

## ಮಕ್ಕಳ ಹಕ್ಕುಗಳ ರಕ್ಷಣೆ - ನಮ್ಮೆಲ್ಲರ ಆದ್ಯ ಹೊಣೆ :-

ಮಕ್ಕಳ ಹಕ್ಕುಗಳ ರಕ್ಷಣೆಯನ್ನು ಆಳುವ ಸರ್ಕಾರಗಳು ಸರ್ವಶೇಷ್ಠ ಆದ್ಯತೆ ಎಂದು ಪರಿಗಣಿಸುವವರೆಗೂ ಈ ಸಮಸ್ಯೆ ಜ್ವಲಂತವಾಗಿಯೇ ಇರುವುದು.ಮಕ್ಕಳನ್ನು "ನಾಳೆಯ ಪ್ರಜೆಗಳು" ಎನ್ನುವುದರ ಬದಲು ಅವರು "ಇಂದಿನ ಪ್ರಜೆಗಳು" ಎಂದು ನಿಜವಾಗಿ ಪರಿಗಣಿಸುವ ಅಗತ್ಯವಿದೆ. ಅವರಿಗೆ ಸಲ್ಲ ಬೇಕಾದ ಹಕ್ಕುಗಳನ್ನು ಇಂದೇ ದೊರಕಿಸಿಕೊಡದಿದ್ದರೆ ನಮ್ಮ ಕನಸಿನ ಅಭಿವೃದ್ಧಿಶೀಲ ಭಾರತ ಖಂಡಿತವಾಗಿ ಕನಸಿನಲ್ಲೇ ಉಳಿದುಬಿಡುತ್ತದೆ ಮಕ್ಕಳ ಹಕ್ಕುಗಳ ರಕ್ಷಣೆಗೆ ಸರ್ಕಾರ, ಸ್ವಯಂ ಸೇವಾ ಸಂಸ್ಥೆಗಳು,ಕೈಗಾರಿಕೆ,ವಾಣಿಜ್ಯ ಸಂಘಟನೆಗಳು, ಮಾಧ್ಯಮ ಹಾಗೂ ಸಮಸ್ತ ನಾಗರೀಕ ಸಮಾಜ ಒಟ್ಟಾಗಿ ಹಾಗೂ ಬದ್ದವಾಗಿ ದುಡಿಯದ ಹೊರತು ಮಕ್ಕಳ ಸಂರಕ್ಷಣೆ ಮರೀಚಿಕೆಯಾಗಿಯೇ ಉಳಿದು ಬಿಡುತ್ತದೆ. 2013 ರ ರಾಷ್ಟ್ರೀಯ ಮಕ್ಕಳ

ಕಾರ್ಯನೀತಿ ಕೂಡ ಈ ಬಗ್ಗೆ ಬಹುವಾಗಿ ಪ್ರಸ್ತಾಪಿಸಿದೆ ಮಕ್ಕಳ ಸಂರಕ್ಷಣೆಗೆ ಎಲ್ಲಾ ಸಂಸ್ಥೆಗಳು ಸಮಗ್ರ ಹಾಗೂ ಸಂಯೋಜಿತವಾಗಿ ಕಾರ್ಯ ನಿರ್ವಹಿಸಬೇಕಿದೆ.

ಬಹಳ ಮುಖ್ಯವಾಗಿ ಪ್ರತಿಯೊಬ್ಬ ನಾಗರೀಕನೂ ಸಹ ಈ ದೇಶದಲ್ಲಾಗುವ ಮಕ್ಕಳ ಮೇಲಿನ ದೌರ್ಜನ್ಯ ಹಾಗೂ ಹಕ್ಕುಗಳ ವಂಚನೆಗೆ ನಾನೂ  ಹೊಣೆಗಾರ ಎಂದು ಭಾವಿಸದಿದ್ದರೆ, ಅದರ ಜವಬ್ದಾರಿ ವಹಿಸದಿದ್ದರೆ ಮಕ್ಕಳ ಹಕ್ಕುಗಳ ರಕ್ಷಣೆ ಸಾಧ್ಯವಾಗುವುದಿಲ್ಲ.ಆಳುವ ವರ್ಗ ಮುಖ್ಯವಾಗಿ ಕೆಲವು ಅಗತ್ಯ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕು

ಅ) ಮಗು/ಮಕ್ಕಳ ವ್ಯಾಖ್ಯಾನದಲ್ಲಿ ಗೊಂದಲಕ್ಕೆ ಅವಕಾಶ ನೀಡದೆ ಸಮಾನ ವ್ಯಾಖ್ಯಾನವನ್ನು ಎಲ್ಲಾ ಕಾಯ್ದೆ-ಕಾರ್ಯ ನೀತಿಗಳಲ್ಲಿ ಅನುಸರಿಸಬೇಕು.

ಆ) 18 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಕಡ್ಡಾಯ ಉಚಿತ ಹಾಗೂ ಉತ್ಕೃಷ್ಟ ಶಿಕ್ಷಣ ನೀಡುವ ಜವಾಬ್ದಾರಿಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾತ್ರ ಹೊರಬೇಕು.

ಇ) ಬಾಲಕಾರ್ಮಿಕ ಪದ್ದತಿಯನ್ನು ಒಂದು "ರಾಷ್ಟ್ರೀಯ ಅಪಮಾನ"ಎಂದು ಘೋಷಿಸಿ, ಕಾಯ್ದೆಯನ್ನು ಬಲಪಡಿಸಿ ಅನುಷ್ಠಾನವನ್ನು ಚುರುಕುಗೊಳಿಸಿ, ಈ ದೇಶದಲ್ಲಿ ಮಕ್ಕಳು ದುಡಿಯುವ ಅವಮಾನಕರ ಸ್ಥಿತಿಯನ್ನು ಸಂಪೂರ್ಣವಾಗಿ ತೊಡೆದು ಹಾಕಬೇಕು.

ಈ) ಸಮಗ್ರ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ,ಮಕ್ಕಳ ಆರೋಗ್ಯ ಕಾರ್ಯಕ್ರಮಗಳು ಅದ್ಯತೆಯ ಮೇರೆಗೆ ಪರಿಗಣಿಸಿ,ಶಿಶು ಮರಣ,ಅಪೌಷ್ಠಿಕತೆಯ ಪಿಡುಗುಗಳನ್ನು ಸಂಪೂರ್ಣವಾಗಿ ಹೋಗಲಾಡಿಸಬೇಕು.

ಉ) ಆಯವ್ಯದಲ್ಲಿ ನೆಪಮಾತ್ರಕ್ಕೆ ಅಲ್ಪ ಅನುದಾನ ನೀಡುವ ಬದಲು,ವೈಜ್ಞಾನಿಕವಾಗಿ ಮಕ್ಕಳ ಅಗತ್ಯಗಳನ್ನು ವಿಶ್ಲೇಷಿಸಿ ಕನಿಷ್ಠ ಶೇ.10ರಷ್ಟು ಅನುದಾನ ಅಥವಾ ಸೂಕ್ತವಾದ ಪ್ರಮಾಣವನ್ನು ನೀಡುವುದಷ್ಟೇ ಅಲ್ಲದೆ, ಕೊಟ್ಟ ಅನುದಾನದ ಸಂಪೂರ್ಣ ಹಾಗೂ ಸಮರ್ಥ ಬಳಕೆಗೆ ಸೂಕ್ತ ಸಾಂಸ್ಥಿಕ ವ್ಯವಸ್ಥೆ ರಚಿಸಬೇಕು.

ಊ) ಕೈಗಾರಿಕೆ,ವಾಣಿಜ್ಯ ಮತ್ತು ವ್ಯಾಪಾರಿ ಸಂಸ್ಥೆಗಳು ಕೇವಲ ತಮ್ಮ ಸಂಸ್ಥೆಗಳಷ್ಟೇ ಅಲ್ಲದ ತಾವು ಅವಲಂಬಿತವಾಗಿರುವ, ಕಚ್ಚಾವಸ್ತುಗಳನ್ನು ಪೂರೈಸುವ, ಸೇವೆಗಳನ್ನು ನೀಡುವ ಪಾಲುದಾರ ಸಂಸ್ಥೆಗಳು ಸಹ ಮಕ್ಕಳನ್ನು ದುಡಿಸಿಕೊಳ್ಳದೆ ಇರುವ ಕನಿಷ್ಠ ವಾತಾವರಣ ನಿರ್ಮಿಸುವ ಜವಾಬ್ದಾರಿವಹಿಸಬೇಕು.

ಋ) ನಾಗರೀಕ ಸಮಾಜ ಮಕ್ಕಳ ದುಡಿಮೆ ಹಾಗೂ ಶೋಷಣೆಯ ವಿರುದ್ದ 'ಶೂನ್ಯ ಸಹಿಷ್ಣುತೆ" ತೋರಬೇಕು. ಮಕ್ಕಳ ಹಕ್ಕುಗಳ ಉಲ್ಲಂಘನೆ ಕಂಡಕೂಡಲೇ ಕನಿಷ್ಠ "ಪ್ರತಿಭಟನೆ" ವ್ಯಕ್ತಪಡಿಸಬೇಕು, ಮುಂದುವರೆದು ಪ್ರಾಧಿಕಾರಗಳಿಗೆ ದೂರನ್ನು ದಾಖಲಿಸುವ ಜವಾಬ್ದಾರಿ ವಹಿಸಬೇಕು. ಇತ್ತಿಚಿನ ದಿನಗಳಲ್ಲಿ ಪ್ರಾಧಿಕಾರಗಳು ದೂರು ಸ್ವೀಕರಿಸುವ  ವ್ಯವಸ್ಥೆಗಳನ್ನು ಸುಲಭಗೊಳಿಸಿ ಕೇವಲ ಒಂದು ದೂರವಾಣಿ ಕರೆ ಈ-ಮೇಲ್ ಮೂಲಕ ದೂರು ಪಡೆಯುತ್ತಿದೆ. ಪ್ರತಿ ನಾಗರೀಕರು ತಮ್ಮ ಮೊಬೈಲ್ ಫೋನುಗಳನ್ನು ಒಂದು ಉತ್ತಮ ಕಾರ್ಯಕ್ಕೆ ಬಳಸಬೇಕು. ಮಕ್ಕಳು ಯಾವುದೇ ಸಮಾಜದ ಅತ್ಯಮೂಲ್ಯ ಸಂಪತ್ತು, ಅವರ ರಕ್ಷಣೆ ಹಾಗೂ ವಿಕಾಸದ ಕಡೆಗಣನೆ ಭವಿಷ್ಯದ ಬುನಾದಿಯನ್ನೇ ಶಿಥಿಲಗೊಳಿಸುವುದರಲ್ಲಿ ಅನುಮಾನವಿಲ್ಲ.

ರಾಜ್ಯ ಮಟ್ಟದ ವಿತ್ತೀಯ ಕಾರ್ಯನೀತಿ ಸಂಸ್ಥೆಯಲ್ಲಿ *'ವಿಶೇಷ ಮಕ್ಕಳ ಆಯವ್ಯಯ ಕೋಶ'* ರಚಿಸಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯನ್ನು, ಅನುದಾನದ ಸರಿಯಾದ ಉಪಯೋಗದ ಬಗ್ಗೆ ನಿಗಾವಹಿಸಲು ಹೊಣೆಗಾರರನ್ನಾಗಿ ಮಾಡಬೇಕು.

ಎ) ಪ್ರತಿ ಜಿಲ್ಲೆಗಳಲ್ಲೂ ಮಕ್ಕಳ ಕಲ್ಯಾಣ ಸಮಿತಿಗಳನ್ನು ಸರಿಯಾದ ಕ್ರಮದಲ್ಲಿ ಸ್ಥಾಪಿಸಿ,ಅದರ ಕಾರ್ಯ ನಿರ್ವಹಣೆಗೆ ಸಮಸ್ತ ಅನುಕೂಲಗಳನ್ನು ಕಲ್ಪಿಸಬೇಕು. ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ನಿಜವಾದ ರೀತಿಯಲ್ಲಿ ಸೌಲಭ್ಯ ಹಾಗೂ ಅಧಿಕಾರವನ್ನು ನೀಡಬೇಕು.

ಏ) ಮಕ್ಕಳ ಕಲ್ಯಾಣ ಕಾರ್ಯಕ್ರಮಗಳು ವಿವಿಧ ಇಲಾಖೆಗಳಲ್ಲಿ ಹಂಚಿಹೋಗಿದೆ ಹಾಗೂ ಅದು ಅಗತ್ಯವೂ ಆಗಿದೆ. ಅವುಗಳ ಸಂಯೋಜನೆ ಹಾಗೂ ಮೇಲುಸ್ತುವಾರಿಗೆ ಜಿಲ್ಲಾ ಮಟ್ಟದಲ್ಲಿ ಸಾಂಸ್ಥಿಕ ವ್ಯವಸ್ಥೆ ರೂಪಿಸಬೇಕು. ಕಡೇ ಪಕ್ಷ ರಕ್ಷಣೆ ಕುರಿತಾದ ಕಾರ್ಯಕ್ರಮಗಳು (ಉದಾ: ಬಾಲ ಕಾರ್ಮಿಕ ಸೊಸೈಟಿ,ಮಕ್ಕಳ ಸಂರಕ್ಷಣಾ ಅಧಿಕಾರಿ/ಯೋಜನೆಯ ಕಾರ್ಯಾಲಯ,ಮಕ್ಕಳ ಕಲ್ಯಾಣ ಸಮಿತಿ,ಬಾಲ ನ್ಯಾಯ ಮಂಡಳಿ) ಒಂದೇ ಸೂರಿನಡೆ ಕಾರ್ಯ ನಿರ್ವಹಿಸಿದೆ, ಪರಸ್ಪರ ಸಂಯೋಜನೆ ಸಾಧಿಸಲು ಅನುಕೂಮಲವಾಗಬಹುದು.

ರಾಷ್ಟ್ರಪಿತ ಗಾಂಧೀಜಿಯವರು ಹೇಳಿದಂತೆ ಈ ಪ್ರಪಂಚದಲ್ಲಿ ನಾವು ನಿಜವಾದ ಶಾಂತಿಯನ್ನು ಹೊಂದಬೇಕಾದರೆ,ನಾವು ಮೊದಲು ಅದನ್ನು ಮಕ್ಕಳಿಂದ ಪ್ರಾರಂಭಿಸಬೇಕು. ಮಕ್ಕಳ ವಿಕಾಸವೇ ಸರ್ವಸ್ವ.

**ಕೋಫಿ ಅನ್ನಾನ್** ರವರು ಮಕ್ಕಳ ಬಗೆಗೆ ಹೇಳಿರುವ ಮಾತು ಈ ಲೇಖನಕ್ಕೆ ಸರಿಯಾದ ಸಮಾಪ್ತಿ ನೀಡುತ್ತದೆಂದು ಭಾವಿಸುತ್ತೇನೆ **"ಈ ಪ್ರಪಂಚ ಮಕ್ಕಳೊಂದಿಗೆ ಹೊಂದಿರುವ ನಂಬಿಕೆಗಿಂತಲೂ ಪವಿತ್ರವಾದದ್ದು ಮತ್ತೊಂದಿಲ್ಲ. ಮಕ್ಕಳ ಹಕ್ಕನ್ನು ಗೌರವಿಸುವ ಅವರ ಅಭಿವೃದ್ಧಿಯನ್ನು ರಕ್ಷಿಸುವ ಅವರು ಭಯಮುಕ್ತ ವಾತಾವರಣದಲ್ಲಿ ಶಾಂತಿಯೊಂದಿಗೆ ಬೆಳೆಯುವ ವ್ಯವಸ್ಥೆಯನ್ನು ಖಾತ್ರಿ ಪಡಿಸುವುದಕ್ಕಿಂತ ಬೇರೆ ಯಾವುದೇ ಕೆಲಸ ಮುಖ್ಯವಾಗಲಾರದು".**

**ನಮ್ಮನ್ನು ಆಳುವ ಸರ್ಕಾರಗಳು ಹಾಗು ರಕ್ಷಣೆಯ ಹೊಣೆ ಹೊತ್ತ ಸಂಸ್ಥೆಗಳು ಮೇಲಿನ ಮಾತನ್ನು ಅರ್ಥೈಸಿಕೊಂಡರೆ ನಿಜಕ್ಕೂ ಈ ದಿನಕ್ಕೆ ಅರ್ಥಬರುತ್ತದೆ. ಮಕ್ಕಳಿಗೆಲ್ಲಾ ಶುಭವಾಗಲಿ!**

**- ಬಸವರಾಜು ರಾಜಶೇಖರಮೂರ್ತಿ**

(ಬಸವರಾಜು.ಆರ್ ಪ್ರಸ್ತುತ್ತ ಗ್ರಾಸ್ ರೂಟ್ಸ್ ರಿಸರ್ಚ್ ಅಂಡ್ ಅಡ್ವೋಕಸಿ ಮೂವ್ ಮೆಂಟ್ ನ ಕಾರ್ಯಕಾರಿ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ರಾಜ್ಯ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಕರ್ನಾಟಕ ಸರ್ಕಾರ ರಚಿಸಿದ ರಾಜ್ಯ ಮಟ್ಟದ ಸಲಹಾ ಸಮಿತಿಯ ಸಂಚಾಲಕರಾಗಿ ರಾಜ್ಯ ಬಾಲ ಕಾರ್ಮಿಕ ನಿರ್ಮೂಲನಾ ಕ್ರಿಯಾ ಯೋಜನೆಯ ರಚನೆಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ.)